ಬೆಂಗಳೂರು
ನಗರ ವಿಶ್ವವಿದ್ಯಾನಿಲಯ

**BENGALURU CITY UNIVERSITY**

Office of the Registrar, Central College Campus, Dr. B.R. Ambedkar Veedhi, Bengaluru – 560 001.
PhNo.080-22131385, E-mail: registrarbcu@gmail.com

**ಸಂಖ್ಯೆ: ಬಿಸಿಯು/ವಿ.ವಿ.ಪ/ಬಿ.ಓ.ಸಿ/2021-22** **ದಿನಾಂಕ: 08.06.2021**

ಗೆ,
ಮಾನ್ಯ ವಿದ್ಯಾವಿಷಯಕ ಪರಿಷತ್ತಿನ ಸದಸ್ಯರು,
ಬೆಂಗಳೂರು ನಗರ ವಿಶ್ವವಿದ್ಯಾನಿಲಯ,
ಬೆಂಗಳೂರು

ಮಾನ್ಯರೆ,

**ವಿಷಯ: ವಿದ್ಯಾವಿಷಯಕ ಪರಿಷತ್ತಿನ ಪರಿಚಲನೆಯ ಸಭೆಯ ನಡಾವಳಿಗಳು.**

***

ದಿನಾಂಕ 05.05.2021 ರಂದು ಆನ್ ಲೈನ್ ಪರಿಚಲನೆಯ ಮುಖಾಂತರ ಕಳುಹಿಸಲಾಗಿದ್ದ ಕಾರ್ಯಸೂಚಿಗೆ ಮಾನ್ಯ ಸದಸ್ಯರುಗಳು ಇ-ಮೇಲ್ ಮುಖಾಂತರ ನೀಡಿರುವ ಅನುಮೋದನೆಯ ಅನುಸಾರವಾಗಿ ನಡಾವಳಿಗಳನ್ನು ಮಾನ್ಯ ಕುಲಪತಿಗಳು ಅನುಮೋದಿಸಿರುವಂತೆ, ಈ ಪತ್ರದೊಂದಿಗೆ ವಿದ್ಯಾವಿಷಯಕ ಪರಿಷತ್ತಿನ ಸಭೆಯ (By Circulation) ಪರಿಚಲನೆಯ ಮುಖಾಂತರ ಪಡೆದಿರುವ ಅನುಮೋದನೆಯ ನಡಾವಳಿಗಳನ್ನು ಲಗತ್ತಿಸಲಾಗಿದೆ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

ಕುಲಸಚಿವರು

ಅಡಕ: ಮೇಲಿನಂತೆ

ಪ್ರತಿಗಳು:

1. ರಾಜ್ಯಪಾಲರ ಕಾರ್ಯದರ್ಶಿಗಳು, ರಾಜಭವನ, ಬೆಂಗಳೂರು – 560 001.
2. ಪ್ರಧಾನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ (ವಿಶ್ವವಿದ್ಯಾಲಯ), ಕರ್ನಾಟಕ ಸರ್ಕಾರ, ಬೆಂಗಳೂರು-1.
3. ಕುಲಪತಿಗಳು, ಕುಲಸಚಿವರು, ಕುಲಸಚಿವರು (ಮೌಲ್ಯಮಾಪನ), ವಿತ್ತಾಧಿಕಾರಿಗಳ ಆಪ್ತ ಕಾರ್ಯದರ್ಶಿಗಳಿಗೆ. ಬಿಸಿಯು.
4. ಕಛೇರಿ ಪ್ರತಿ / ರಕ್ಷಣಾ ಕಡತ

ಬೆಂಗಳೂರು
ನಗರ ವಿಶ್ವವಿದ್ಯಾನಿಲಯ

BENGALURU
CITY UNIVERSITY

Office of the Registrar, Central College Campus, Dr. B.R. Ambedkar Veedhi, Bengaluru – 560 001.
PhNo.080-22131385, E-mail: registrarbcu@gmail.com

ಸಂಖ್ಯೆ: ಬೆಸಿಯು/ವಿವಿಪ/ಬಿ.ಓ.ಸಿ/2021-22/45 ದಿನಾಂಕ: 13.05.2021

**ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ವಿದ್ಯಾವಿಷಯಕ ಪರಿಷತ್ತಿನ ಆನ್-ಲೈನ್ ಪರಿಚಲನೆಯ ನಡಾವಳಿಗಳು.**

**ವಿಷಯ:** 2020-21ನೇಸಾಲಿನ ಸಂಯೋಜನಾ ನವೀಕರಣ/ಹೊಸಕೋರ್ಸಿನ ಸಂಯೋಜನೆ/ಶಾಶ್ವತ ಸಂಯೋಜನಾ ನವೀಕರಣ/ ಹೊಸ ಶಾಶ್ವತ ಸಂಯೋಜನೆ/ವಿದ್ಯಾರ್ಥಿ ಪ್ರಮಾಣ ಹೆಚ್ಚಳಕ್ಕೆ ಸಂಬಂಧಿಸಿದಂತೆ ನೇಮಿಸಿದ್ದ ಸ್ಥಳೀಯ ವಿಚಾರಣಾ ಸಮಿತಿಯ ಅಧ್ಯಕ್ಷರು ಸಲ್ಲಿಸಿರುವ ವರದಿಗಳನ್ನು ಪರಿಗಣಿಸುವ ಬಗ್ಗೆ.

ಬೆಂಗಳೂರು ನಗರ ವಿಶ್ವವಿದ್ಯಾನಿಲಯದ 2020-21 ನೇ ಸಾಲಿನ ಸಂಯೋಜನೆಗಾಗಿ 13 ಸ್ಥಳೀಯ ವಿಚಾರಣಾ ಸಮಿತಿಗಳನ್ನು ರಚಿಸಲಾಗಿ ದಿನಾಂಕ 23.02.2021 ರಂದು ನಡೆದ ವಿದ್ಯಾವಿಷಯಕ ಪರಿಷತ್ತಿನ ಸಭೆಯಲ್ಲಿ ಹಾಗೂ ದಿನಾಂಕ 26.02.2021 ರಂದು ಜರುಗಿದ ಸಿಂಡಿಕೇಟ್ ಸಭೆಯಲ್ಲಿ 12 ಸ್ಥಳೀಯ ವಿಚಾರಣಾ ಸಮಿತಿಯ ಅಧ್ಯಕ್ಷರು ಸಲ್ಲಿಸಿದ್ದ ವರದಿಗಳನ್ನು ಮಂಡಿಸಲಾಗಿ ಸಭೆಯ ಅನುಮೋದನೆಯಂತೆ ಕ್ರಮ ಜರಗಿಸಲಾಗಿದೆ ಹಾಗೂ ನವೀಕರಣದ ಆದೇಶಗಳನ್ನು ಹೊರಡಿಸಲಾಗಿದೆ. ಉಳಿದಂತೆ ಡಾ. ವಿ.ಆರ್ ದೇವರಾಜ್ ರವರ ಅಧ್ಯಕ್ಷತೆಯಲ್ಲಿ ರಚಿಸಿದ್ದ ಸ್ಥಳೀಯ ವಿಚಾರಣಾ ಸಮಿತಿಗೆ ಒಂದು ಹೊಸ ಕಾಲೇಜಿನ ಸಂಯೋಜನೆ ಸೇರಿದಂತೆ ಒಟ್ಟು 16 ಕಾಲೇಜುಗಳ ವರದಿಗಳನ್ನು, ಶ್ರೀ ಥಾಮಸ್ ನೀಲಿಯಾರ ರವರ ಸಮಿತಿಯ 5 ವರದಿಗಳು, ಡಾ. ಎಂ. ಪಾಂಡುರಂಗಪ್ಪ ರವರ ಸಮಿತಿಯ 2 ವರದಿಗಳು, ಡಾ. ಪದ್ಮಜಾ ರವರ ಸಮಿತಿಯ 1 ವರದಿ ಮತ್ತು ಪ್ರೊ. ಚಿಕ್ಕಮುನಿಯಪ್ಪ ರವರ ಸಮಿತಿಯ 1 ವರದಿ ತಾಂತ್ರಿಕ ಕಾರಣಗಳಿಂದಾಗಿ ನಿಗದಿತ ಅವಧಿಯಳೊಗೆ ಸಲ್ಲಿಸಲಾಗಿರಲಿಲ್ಲ. ಪ್ರಸ್ತುತ ಸಮಿತಿಗಳು ವರದಿಗಳನ್ನು ಸಲ್ಲಿಸಿವೆ.

ಆದುದರಿಂದ ಸದರಿ ಸಂಯೋಜನಾ ಸಮಿತಿಗಳ ವರದಿಗಳನ್ನು ಕೋವಿಡ್ ಲಾಕ್ ಡೌನ್ ನಿಯಾಮಾವಳಿಗಳ ಪ್ರಕಾರ ವಿದ್ಯಾವಿಷಯಕ ಪರಿಷತ್ತಿನ ಸಭೆಯನ್ನು ಆಯೋಜಿಸಲು ಸಾಧ್ಯವಿಲ್ಲದ ಕಾರಣದಿಂದ ಆನ್-ಲೈನ್ ಪರಿಚಲನೆಯ ಮುಖಾಂತರ (By circulation online) ಅನುಮೋದನೆಗಾಗಿ ಕೋರಿ ಇ-ಮೇಲ್ ಮುಖಾಂತರ ಎಲ್ಲಾ ಮಾನ್ಯ ಸದಸ್ಯರುಗಳಿಗೆ ವರದಿಗಳನ್ನು 5.05.2021 ರಂದು ಕಳುಹಿಸಲಾಗಿತು.

ಮಾನ್ಯ ಸದಸ್ಯರುಗಳಿಂದ ಸದರಿ ವಿಷಯಕ್ಕೆ ಅನುಮೋದನೆಗಳನ್ನು ಸ್ವೀಕರಿಸಲಾಗಿದ್ದು, ಈ ಕೆಳಕಂಡಂತೆ ನಿರ್ಣಯಿಸಲಾಗಿದೆ.

**ವಿದ್ಯಾವಿಷಯಕ ಪರಿಷತ್ ಸಭೆ ನಿರ್ಣಯ**

ಸೂಚಿತ ವಿಷಯಕ್ಕೆ ಸಂಬಂಧಿಸಿದಂತೆ ವಿದ್ಯಾವಿಷಯಕ ಪರಿಷತ್ತಿನ 23 ಸದಸ್ಯರುಗಳು ಇ-ಮೇಲ್ ಮುಖಾಂತರ ಅನುಮೋದನೆಯನ್ನು ನೀಡಿರುವುದರಿಂದ, ಬೆಂಗಳೂರು ನಗರ ವಿಶ್ವವಿದ್ಯಾನಿಲಯದ 2020-21 ನೇ ಸಾಲಿನ ಸಂಯೋಜನೆಗಾಗಿ ರಚಿಸಿದ್ದ ಡಾ. ವಿ.ಆರ್ ದೇವರಾಜ್ ರವರ ಅಧ್ಯಕ್ಷತೆಯಲ್ಲಿ ಸಲ್ಲಿಸಿದ್ದ 16 ಕಾಲೇಜುಗಳ ವರದಿಗಳನ್ನು, ಶ್ರೀ ಥಾಮಸ್ ನೀಲಿಯಾರ ರವರ ಸಮಿತಿಯ 5 ವರದಿಗಳನ್ನು, ಡಾ. ಎಂ. ಪಾಂಡುರಂಗಪ್ಪ ರವರ ಸಮಿತಿಯ 2 ವರದಿಗಳನ್ನು, ಡಾ. ಪದ್ಮಜಾ ರವರ ಸಮಿತಿಯ 1 ವರದಿಯನ್ನು ಮತ್ತು ಪ್ರೊ. ಚಿಕ್ಕಮುನಿಯಪ್ಪ ರವರ ಸಮಿತಿಯ 1 ವರದಿಯನ್ನು ಮುಂದಿನ ಪ್ರಕ್ರಿಯೆಗಾಗಿ ಅನುಮೋದಿಸಲಾಗಿದೆ.

ಕುಲಸಚಿವರು ಹಾಗೂ
ಸದಸ್ಯ ಕಾರ್ಯದರ್ಶಿಗಳು

ಕುಲಪತಿಗಳು